ದಾವಣಗೆರೆ ಸಾರ್ವಜನಿಕ ಆಸ್ಪತ್ರೆಯಂ ಬಗ್ಗೆ

೧೯೭೧. ಶ್ರೀ ಪಂಪಾಪತಿ (ದಾವಣಗೆರೆ).—ವಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಾವಣಗೆರೆ ಜಿಗಟೇರಿ ಸಾರ್ವಜನಿಕ ಆಸ್ಪತ್ರೆಯು ನಾಲ್ಕನೇ ರಾಷ್ಟ್ರೀಯ ಹೆದ್ದಾರಿಯಲ್ಲಿದ್ದಿ ಐದು ಜಿಲ್ಲೆಗಳ ಸಂಪರ್ಕ ಹೊಂದಿರುವುದರಿಂದ ರೋಗಿಗಳ ಸಂಖ್ಯೆ ಹೆಚ್ಚಾಗಿ ಅದಕ್ಕನುಗುಣವಾಗಿ ವಿವಿಧ ಔಷಧ ಮತ್ತು ಉಪಕರಣಗಳನ್ನು ಪೂರೈಸಲು ಸರ್ಕಾರವು ಕ್ರಮಕೈಗೊಳ್ಳಿವುದೇ?

ಆ) ಬೆಂಗಳೂರು ಕಿದ್ವಾಯಿ ಆಸ್ಪತ್ರೆಯಲ್ಲಿ ರೋಗಿಗಳ ಪೋಷಕರಿಗೆ ಕಟ್ಟಿಸಿರುವ ಛತ್ರದಂತೆ ಸದರಿ ಆಸ್ಪತ್ರೆಗೂ ಈ ಸೌಲಭ್ಯವನ್ನೊದಗಿಸಲು ಸರ್ಕಾರವು ಉದ್ದೇಶಿಸಿದೆಯೇ?

ಇ) ಬೆಂಗಳೂರಿನಲ್ಲಿರುವ ಜಯದೇವ ಹೃದ್ರೋಗ ಚಿಕಿತ್ಸಾಲಯದ ಮಾದರಿಯಲ್ಲಿ ದಾವಣಗೆರೆಯಲ್ಲಿಯೂ ಸಹ ಅಂತಹ ಚಿಕಿತ್ಸಾಲಯವನ್ನು ತೆರೆಯುವ ವಿಚಾರ ಸರ್ಕಾರಕ್ಕಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು)

ಅ) ಏಗತ್ಯ ಔಷಧಿ ಮತ್ತು ಉಪಕರಣಗಳನ್ನು ಪೂರೈಸಲಾಗಿದೆ.

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಸಣ್ಣ ಉಳಿತಾಯಂ ಇಲಾಖೆಯಿಂದ ವಂದ್ರಿಸಿರುವ ಸಣ್ಣ ಡೈರಿಗಳಂ.

೧೩೪೯. ಶ್ರೀ ಎನ್. ಟಿ. ಬೊಮ್ಮಣ್ಣ, (ಕೂಡ್ಲಗಿ).—ವಮಾನ್ಯ ಹಣಕಾಸು, ಸಣ್ಣ ಉಳಿತಾಯ ಮತ್ತು ಬಂದೀಖಾನೆಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಣ್ಣ ಉಳಿತಾಯ ಇಲಾಖೆಯಂವರು ೧೯೮೮ರ ಸಣ್ಣ ಡೈರಿಗಳನ್ನು ಮುದ್ರಿಸಿದ್ದಾರೆಯೆ;

ಆ) ಹಾಗಿದ್ದಲ್ಲಿ, ಮುದ್ರಿಸಿರುವ ಡೈರಿಗಳ ಸಂಖ್ಯೆಯೆಷ್ಟು;

ಇ) ಈ ಡೈರಿಗಳನ್ನು ಯಾವ ರೀತಿ ಹಂಚಲಾಗಿದೆ ಹಾಗೂ ಇದಕ್ಕೆ ತಗಲಿರುವ ವೆಚ್ಚವೆಷ್ಟು;

ಈ) ಈ ಡೈರಿಯು ಸಾರ್ವಜನಿಕರಿಗೆ ಸುಲಭವಾಗಿ ದೊರೆಯಲು ಇವುಗಳಿಗೆ ಬೆಲೆ ನಿಗದಿ ಮಾಡಿ ಮಾರಲು ಏನಾದರೂ ಉದ್ದೇಶಿಸಲಾಗಿದೆಯೆ;

ಉ) ಇನ್ನು ಮುಂದೆ ಇವುಗಳನ್ನು ಸಂಲಭ ಬೆಲೆಗೆ ಮಾರುವ ವ್ಯವಸ್ಥೆ ಮಾಡಲಾಗುವುದೆ?

ಶ್ರೀ ವೀರಣ್ಣ (ಸಣ್ಣ ಉಳಿತಾಯ, ಹಣಕಾಸು ಮತ್ತು ಬಂದೀಖಾನೆಯ ರಾಜ್ಯ ಸಚಿವರು).—

ಅ) ಹೌದು

ಆ) ೬೬,೦೦೦

ಇ) ಈ ಡೈರಿಗಳನ್ನು ಸಭೆ, ಸಮಾರಂಭಗಳಲ್ಲಿ ಸಣ್ಣ ಉಳಿತಾಯ ಇಲಾಖಾಧಿಕಾರಿಗಳ ಮೂಲಕ ಉಚಿತವಾಗಿ ಹಂಚಲಾಗಿದೆ. ವಂದ್ರಿತ ವೆಚ್ಚದ ಬಗ್ಗೆ ಸರ್ಕಾರಿ ಮುದ್ರಣಾಲಯದಿಂದ ಇನ್ನು ಅಂತಿಮ ಬಿಲ್ಲು ಬಂದಿರುವುದಿಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.